''ಯಾವುದೇ ಹಿನ್ನೆಲೆಯಿಲ್ಲದೆ ಈ ಕ್ಷೇತ್ರಕ್ಕೆ ಬರುವಾಗ ಪ್ರತಿಭೆಯಿಂದಲೇ ಗೆಲ್ಲಬೇಕು, ಅದರಿಂದಲೇ ಅವಕಾಶ ಗಿಟ್ಟಿಸಿಕೊಳ್ಳಬೇಕು ಎಂಬ ಅರಿವು ನನಗಿತ್ತು. ಒಂದಷ್ಟು ವರ್ಷ ರಂಗಭೂಮಿಯಲ್ಲಿಯೇ ನನ್ನನ್ನು ನಾನು ತಿದ್ದಿಕೊಳ್ಳುತ್ತಲಿದ್ದೆ. 2019ರ ಹೊತ್ತಿಗೆ ಸಿನಿಮಾರಂಗಕ್ಕೆ ಬರಲು ಆತ್ಮವಿಶ್ವಾಸ ಬಂದಿತ್ತು. ಆಗ ಮೊದಲ ಅವಕಾಶವಾಗಿ ಬಂದದ್ದು '6ನೇ ಮೈಲಿ' ಸಿನಿಮಾ. ನಂತರ 'ಆದಿಪುರಾಣ' ಸಿನಿಮಾ ಅವಕಾಶವೂ ಲಭಿಸಿತು'' ಎಂದು ಮಾಹಿತಿ ನೀಡುತ್ತಾರೆ.

'ಡೇರ್‌ಡೆವಿಲ್ ಮುಸ್ತಾಫಾ', ಆದಿತ್ಯ ಅವರಿಗೆ ಬ್ರೇಕ್ ಕೊಟ್ಟ ಚಿತ್ರ. ರಂಗಭೂಮಿಯ ಅನುಭವಗಳನ್ನು, ಸ್ವಂತ ಹೊಳಹುಗಳನ್ನು ಒಟ್ಟು ಮಾಡಿ ಸಿದ್ಧತೆ ಮಾಡಿಕೊಂಡು ಕಟ್ಟಿಕೊಟ್ಟ ಅಯ್ಯಂಗಾರಿ ಪಾತ್ರ ಸದಭಿರುಚಿಯ ಪ್ರೇಕ್ಷಕರ ಮನಸ್ಸನ್ನು ಗೆದ್ದಿತು. ಈ ಸಿನಿಮಾ ಯಶಸ್ಸಿನ ನಂತರ ಹಲವು ಅವಕಾಶಗಳು ಬಂದರೂ ತಾವು ನಿರ್ವಹಿಸಬೇಕಾದ ಪಾತ್ರ, ಸಿನಿಮಾಗಳ ಕುರಿತ ತಮ್ಮ ನಿರೀಕ್ಷೆಯ ಗಡಿ ದಾಟಲು ಬಯಸಲಿಲ್ಲ.

'ಮುಖ್ಯ ಪಾತ್ರ, ಸಣ್ಣ ಪಾತ್ರ, ದೊಡ್ಡ ಪಾತ್ರ ಎಂಬುದೆಲ್ಲ ನನ್ನ ಮನಸ್ಸಿನಲ್ಲಿಲ್ಲ. ಆದರೆ ಯಾವ ಪಾತ್ರವನ್ನು ಮಾಡಿದರೂ ಜನರ ಮನಸ್ಸನ್ನು ಅದು ಕಾಡಬೇಕಷ್ಟೇ. ಬಂದಿದ್ದೆಲ್ಲಾ ಬಾಚಿಕೊಳ್ಳದೇ ಜನರಿಗೆ ಇಷ್ಟವಾಗುವಂಥ ಪಾತ್ರಗಳನ್ನೇ ಮಾಡಬೇಕು' ಎಂದು ಸರಳವಾಗಿ ತಮ್ಮ ನಿರೀಕ್ಷೆಯನ್ನು ತೆರೆದಿಡುತ್ತಾರೆ.

ಆ ಸಮಯದಲ್ಲಿಯೇ 'ಬಲರಾಮನ ದಿನಗಳು' ಸಿನಿಮಾ ಆದಿತ್ಯ ಮುಂದೆ ತೆರೆದುಕೊಂಡಿತು. 90ರ ದಶಕದಲ್ಲಿನ ಬೆಂಗಳೂರಿನ ಭೂಗತಲೋಕದ ಕಥೆಯಲ್ಲಿ 'ಸಿಂಗ್ಲಿ' ಪಾತ್ರದಲ್ಲಿ ಕಾಣಿಸಿಕೊಳ್ಳುವ ಅವಕಾಶ ಕೈ ಸೇರಿತು.

'ಆ ಪಾತ್ರ ನಾಯಕ ಅಲ್ಲ, ವಿಲನ್ ಅಲ್ಲ, ಅವನ ಲೋಕದಲ್ಲಿ ಅವನೇ ರಾಜ. ಯಾರನ್ನು ಬೇಕಾದರೂ ಎದುರು ಹಾಕಿಕೊಂಡು ಬದುಕು ಕಟ್ಟಿಕೊಳ್ಳಬೇಕೆಂಬ ಹುಚ್ಚು ಹಟಕ್ಕೆ ಬೀಳುವಂಥ ಪಾತ್ರ. ಅಯ್ಯಂಗಾರಿ ಕ್ಲಾಸ್ ಪ್ರೇಕ್ಷಕರನ್ನು ತಲುಪಿದ್ದ. ಇನ್ನೂ ಬೇರೆ ಬೇರೆ ವರ್ಗದ ಪ್ರೇಕ್ಷಕರಿದ್ದಾರೆ. ಅವರಿಗೆ ಈ ಪಾತ್ರದ ಮೂಲಕ ನನ್ನ ಪರಿಚಯ ಆಗಬೇಕು. ನನ್ನ ಬಗ್ಗೆ ಒಂದು ನಂಬಿಕೆ ಹುಟ್ಟಬೇಕು' ಎಂದು ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡುತ್ತಾರೆ.

ಸದ್ಯ 'ಬಲರಾಮನ ದಿನಗಳು' ಸಿನಿಮಾ ಚಿತ್ರೀಕರಣ ಮುಗಿಸಿರುವ ಅವರು, ಮತ್ತೊಂದು ಕನ್ನಡ ಸಿನಿಮಾದಲ್ಲಿಯೂ ತೊಡಗಿಕೊಂಡಿದ್ದಾರೆ. ಇದರೊಂದಿಗೆ ಸಿನಿಮಾ ನಿರ್ದೇಶನದ ತಯಾರಿಯಲ್ಲಿಯೂ ಇದ್ದು, ಸದಭಿರುಚಿಯ ಚಿತ್ರವನ್ನು ಖಂಡಿತ ನೀಡುವುದಾಗಿ ಭರವಸೆ ವ್ಯಕ್ತಪಡಿಸುತ್ತಾರೆ. ■



# ಕನಕವತಿಯ ಹಿಂದಿನ ಕಥೆ...

**'ಕಾಂತಾರ ಅಧ್ಯಾಯ 1'** ಸಿನಿಮಾ ಯಶಸ್ಸಿನಲೆಯಲ್ಲಿ ತೇಲುತ್ತಿರುವ ನಟಿ ರುಕ್ಮಿಣಿ ವಸಂತ್ ಈಚೆಗೆ ಸಾಮಾಜಿಕ ಜಾಲತಾಣದಲ್ಲಿ ತೆರೆ ಹಿಂದಿನ ಸಿನಿಮಾ ಕಥೆಯನ್ನು ಹಂಚಿಕೊಂಡಿದ್ದಾರೆ.

'ಕಾಂತಾರ' ಪ್ರೀಕ್ವೆಲ್‌ನಲ್ಲಿ ರಾಣಿ ಕನಕವತಿ ಪಾತ್ರದಲ್ಲಿ ಮಿಂಚಿದ್ದ ರುಕ್ಮಿಣಿ, ಆ ಪಾತ್ರಕ್ಕೆ ಹೇಗೆಲ್ಲಾ ತಯಾರಿ ನಡೆಸಿದ್ದರು ಎಂಬುದನ್ನು ಆ ಚಿತ್ರಗಳು ಹೇಳುತ್ತಿರುವಂತಿವೆ.

ತಮ್ಮ ಪೋಸ್ಟ್‌ಗೆ 'ಬಿಕಮಿಂಗ್ ಕನಕವತಿ' ಎಂದು ಅಡಿಬರಹ ನೀಡಿರುವ ಅವರು, ಸಿನಿಮಾದಲ್ಲಿ ರಾಣಿ ಪಾತ್ರಕ್ಕಾಗಿ ತಾವು ನಡೆಸಿದ್ದ ಕುದುರೆ ಸವಾರಿ ಅಭ್ಯಾಸದ ಚಿತ್ರವನ್ನು ಹಂಚಿಕೊಂಡಿದ್ದಾರೆ. ಚಿತ್ರೀಕರಣ ಸಂದರ್ಭದಲ್ಲಿ ರಿಷಬ್ ಅವರೊಂದಿಗೆ ಸಂಭಾಷಣೆಯಲ್ಲಿ ನಿರತವಾಗಿರುವ, ಹಾಗೆಯೇ ಯೋಧೆಯಂತೆ ಉಡುಪು ತೊಟ್ಟ ಫೋಟೊವನ್ನು, ಪಾತ್ರಗಳ ಕೆಲವು ಸ್ಕೆಚ್‌ಗಳನ್ನು ಹಂಚಿಕೊಂಡಿದ್ದಾರೆ.

ಕನಕವತಿ ಪಾತ್ರದ ಬಗ್ಗೆ ಮಾತನಾಡಿರುವ ರುಕ್ಮಿಣಿ, 'ಕನಕವತಿ ನನಗೆ ಬಹಳ ಸವಾಲಿನ ಪಾತ್ರವಾಗಿತ್ತು. ಇದಕ್ಕಾಗಿ ನಾನು ಕತ್ತಿವರಸೆ, ನೃತ್ಯ, ಕುದುರೆ ಸವಾರಿಯನ್ನು ಕಲಿತಿದ್ದೆ. ಇಂಥ ಪಾತ್ರದ ಅವಕಾಶ ಸಿಕ್ಕಿದ್ದಕ್ಕೆ ನಾನು ಆಭಾರಿ' ಎಂದು ಹೇಳಿದ್ದಾರೆ.

'ಕಾಂತಾರ' ನಂತರ 'ಟಾಕ್ಸಿಕ್' ಚಿತ್ರದಲ್ಲಿಯೂ ಬ್ಯುಸಿಯಾಗಿರುವ ರುಕ್ಮಿಣಿ ತೆಲುಗು ಸಿನಿಮಾವೊಂದರ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದಾರೆ. ಬೇರೆ ಒಂದೆರಡು ಕಥೆಗಳನ್ನು ಕೇಳುತ್ತಿದ್ದಾರೆ. ಸದ್ಯ 'ಕಾಂತಾರ 1' ಸಿನಿಮಾ, ವಿಶ್ವಾದ್ಯಂತ ಪ್ರೇಕ್ಷಕರನ್ನು ತಲುಪುವ ನಿಟ್ಟಿನಲ್ಲಿ ಸಿನಿಮಾ ಇಂಗ್ಲಿಷ್ ಭಾಷೆಯಲ್ಲಿಯೂ ಡಬ್ ಆಗಿದೆ. ■

# ರಾಜಕಾರಣಿ ಪೋಷಾಕಿನಲ್ಲಿ ಶಿವಣ್ಣ

**ಪೆದ್ದಿ, ಜೈಲರ್ 2, 45, ಡ್ಯಾಡ್...** ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ಶಿವಣ್ಣ ಅಪರೂಪದ ಪಾತ್ರವೊಂದಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಹಿರಿಯ ರಾಜಕಾರಣಿಯೊಬ್ಬರ ಜೀವನಗಾಥೆಯನ್ನು ಹೇಳಹೊರಟಿರುವ ಸಿನಿಮಾದಲ್ಲಿ ನಟಿಸುತ್ತಿದ್ದು, ಈಚೆಗೆ ಬಿಡುಗಡೆಯಾಗಿರುವ ಸಿನಿಮಾದ ಫಸ್ಟ್‌ಲುಕ್ ಗಮನಸೆಳೆಯುವಂತಿದೆ.

ಆಂಧ್ರ ಮೂಲದ ಯೆಲ್ಲಾಂಡು ರಾಜಕಾರಣಿ ಗುಮ್ಮಡಿ ನರಸಯ್ಯ ಅವರ ಪಾತ್ರದಲ್ಲಿ ಶಿವಣ್ಣ ಕಾಣಿಸಿಕೊಳ್ಳುತ್ತಿರುವುದು ವಿಶೇಷವೆನಿಸಿದ್ದು, ಈ ಪಾತ್ರ ತಮ್ಮನ್ನು ಸೆಳೆದ ರೀತಿಯ ಕುರಿತು ಮಾತನಾಡಿದ್ದಾರೆ ಶಿವಣ್ಣ.



''ಗುಮ್ಮಡಿ ನರಸಯ್ಯ' ಅವರ ಸೇವೆ–ಕೆಲಸಗಳ ಬಗ್ಗೆ ಕೇಳಿದಾಗ ಈಗಲೂ ಇಂಥ ವ್ಯಕ್ತಿಗಳು ಇದ್ದಾರೆಯೇ ಎಂದು ಅಚ್ಚರಿ ಎನಿಸಿತು. ಅವರಲ್ಲಿದ್ದ ಮೌಲ್ಯಗಳು ನನ್ನನ್ನು ಸೆಳೆದವು. ನಿರ್ದೇಶಕರನ್ನು ನಾನು ಕೇಳಿದೆ, 'ನಾನೇ ಈ ಪಾತ್ರಕ್ಕೆ ಏಕೆ' ಎಂದು. ತೆರೆ ಮೇಲೆ ಅವರನ್ನು ತರಲು ನನ್ನ ಮುಖವೇ ಅವರ ಕಲ್ಪನೆಯಲ್ಲಿ ಬಂದದ್ದು ಎಂದರು. ಈ ಮಾತಿನಿಂದ ನನಗೆ ಬಹಳ ಖುಷಿಯಾಯಿತು' ಎಂದಿದ್ದಾರೆ.

ತೆಲುಗು ಭಾಷೆಯಲ್ಲಿ ಚಿತ್ರೀಕರಣ ನಡೆಯಲಿದ್ದು, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಸಿನಿಮಾ ಸಿದ್ಧಗೊಳ್ಳುತ್ತಿದೆ. ■